

ಪಡಸಾಲೆಯವರೆಗೂ ಹೋಗಿ ಮನೆಯನ್ನು ಯಕ್ಷಲೋಕವನ್ನಾಗಿ ಮಾರ್ಪಡಿಸುತ್ತಿದ್ದವು. ಪರದೇಶಿಯಾಗಿರುವ ಪರಮೇಶಿ ಒಬ್ಬನೆ ಇಷ್ಟೆಲ್ಲ ಹೇಗೆ ಕಲಿತಿದ್ದಾನೆಂದು ನೆರೆಮನೆಯವರು, ಆಚೆಮನೆಯವರು, ಈಚೆಮನೆಯವರು ಹುಡುಗನಿಗೆ ಮೆಚ್ಚುಗೆಯ ಮಾಲೆ ಹಾಕುವರು. ಬಾಗಿಲ ಮುಂದೆ ಅವನು ಬಿಡಿಸುವ ರಂಗೋಲಿಗಳೇನು, ಬೇಸಿಗೆಯ ಬೆಳದಿಂಗಳಿನಲ್ಲಿ ಗೋಡೆಯ ಮೇಲೆ ಅವನು ಬಿಡಿಸುವ ಚಿತ್ತಾರಗಳೇನು, ಬೃಂದಾವನದ ರಾಧಾಕೃಷ್ಣರೇನು, ವಿರಾಟನಗರದ ಕೃಷ್ಣೆಭೀಮರೇನು, ರಣರಂಗದ ಘಟೋತ್ಕಚನೇನು, ಅವನ ಮಾಯಾ ಯುದ್ಧವೇನು, ಅಭಿಮನ್ಯುವಿನ ಕೈಚಳಕವೇನು, ಅಲ್ಲಿಯ ಕುದುರೆ ಕಾಲ್ದಳಗಳೇನು! ಅಬ್ಬಾ! ಸ್ವಲ್ಪವಾದರೂ ಅವನ ನೆರಳು ಬೀಳಿಸಿಕೊಂಡು ಬನ್ನಿರಿ, ಸ್ವಲ್ಪವಾದರೂ ಅವನಲ್ಲಿಯ ಶ್ರದ್ಧೆಯನ್ನು ಕಡ ತನ್ನಿರಿ ಎಂದು ಬೇರೆ ತಾಯಂದಿರು ತಮ್ಮ ಮಕ್ಕಳನ್ನು ಅವರ ಮನೆಗೆ ಕಳಿಸುತ್ತಿದ್ದರು.

ಆ ಮಕ್ಕಳು ಕೂಡ ಕಡಿಮೆಯೇನಿರಲಿಲ್ಲ. ಪಕ್ಕದ ಮನೆಯ ಪರಮೇಶಿಯನ್ನು ಹೊಗಳಿದರೆ ಈ ಹುಡುಗ ಹುಡುಗಿಯರಿಗೆ ಕೋಪ ಬಾರದಿರುತ್ತದೆಯೇ? ತಂದೆತಾಯಿಗಳಿಗೆ ಮರಳಿ ಅನ್ನುತ್ತಿದ್ದರು. ಏಟಿಗೆ ಎದುರೇಟು ಕೊಡುವಲ್ಲಿ ನಿಪುಣರಾಗಿದ್ದ ಮಕ್ಕಳು ಹಿರಿಯರ ಬಾಯಿ ಮುಚ್ಚಿಸುತ್ತಿದ್ದರು. 'ಪರಮೇಶಿ ಹಂಗ ಆಗಲಿಕ್ಕೆ ಮುಖ್ಯ ಕಾರಣ ಅಂದ್ರ ಅವನ ಅವ್ವ. ಆಕಿ ಮೊದಲು ಕಲಾವಿದಳು ಅದಾಳ. ಸೋಬಾನ ಪದ ಎಷ್ಟ ಚೆಂದ ಹೇಳ್ತಾಳ, ಗೊತ್ತೈತೇನು? ನೀವು ಮೊದಲು ಹೋಗಿ ಆಕಿ ಜೋಡಿ ಸ್ವಲ್ಪ ಸೋ ಅನ್ನಿರೆ, ಸೋಬಾನ ಬನ್ನಿರೆ ಅಂತ ಹೇಳಿ ಬರ್ರಿ. ಆಮ್ಯಾಲ ನಾವು ಕಲಿತೇವಿ' ಹುಡುಗಿಯರ ಅಂತಹ ಮಾತುಗಳಿಗೆ ಹೊರಗೆ ಕಟ್ಟೆಯ ಮೇಲೆ ಕೆಮ್ಮುತ್ತ ಕುಳಿತ ಮುದುಕಿಯರು ಮಜವಾದ ಉತ್ತರ ನೀಡುತ್ತಿದ್ದರು. 'ಇವರು ಹೀಂಗ ಸೋಬಾನದ ಮಾತು ಆಡತಾರಂದ್ರ ನಮಗ ಲಗೂ ಮದುವಿ ಮಾಡ್ರಿ ಅಂದಂಗ.. ನಿಂಬೆಯ ಮರದ ಕೆಳಗೆ ರಂಭೆ ನಿಂತಾಳೆ...ಬಾಳೆಯ ಮರದ ಕೆಳಗೆ ಬಾಗಿ ನಿಂತಾಳೆ...ಅಲ್ಲೇನ್ರೇ' ಅಜ್ಜಿಯರ ಚೇಷ್ಟೆಗಳಿಗೆ ಅತ್ತಿಂದಿತ್ತ ಓಡಾಡುತ್ತಿರುವ, ಆಗಷ್ಟೇ ಹರೆಯಕ್ಕೆ ಕಾಲಿಡುತ್ತಿರುವ ಹುಡುಗಿಯರ ಮೋಹಕವೆನಿಸುವ ಗೆಜ್ಜೆಕಾಲುಗಳ ನಿನಾದವೆ ಉತ್ತರವಾಗಿರುತ್ತಿತ್ತು.

ಮನೆಯಲ್ಲಿ ಹೇಳಿದ್ದಾರೆಂದ ಮೇಲೆ ಅವನ ಮನೆಗೆ ಹೋಗಬೇಕಾದ ಕರ್ಮ ಬಂತಲ್ಲ ಎಂದು ಹುಡುಗಿಯರು ಬೇಸರ ಮಾಡಿಕೊಂಡು ಇವನ ಮನೆಗೆ ಬರುವರು. ರಂಗೋಲಿ ಬಿಡಿಸುವಲ್ಲಿ ಪರಮೇಶಿಗಿರುವ ನಿಪುಣತೆಯನ್ನು ಕಂಡು ಮಾರುಹೋಗುತ್ತಿದ್ದರು. ಅವನ ಕೆಲಸಗಳನ್ನೂ ಒಳಗೆ ಅವನ ಅವ್ವ ತಯಾರಿಸುತ್ತಿರುವ ಕಡಲೆಬೇಳೆಯ ಕಡಬುಗಳನ್ನೂ ತದೇಕಚಿತ್ತದಿಂದ ಗಮನಿಸುತ್ತಿದ್ದರು. ಪಾರವ್ವತ್ತೆ ತಯಾರಿಸುವ ಕಡಬುಗಳು ಯಾವ ಕಲಾಕೃತಿಗೂ ಕಡಿಮೆ ಇಲ್ಲ ಎಂಬ ಭಾವನೆ ಅವರಲ್ಲಿ ಆಗ ಬರುವುದು. ಶಿಲ್ಪಿಯೊಬ್ಬ ಉಳಿಯಿಂದ ಚಿತ್ತಾರ ಕೊರೆದಂತೆ ಅವಳು ಹೂರಣದ ಕಡಬುಗಳ ಅಂಚುಗಳಿಗೆ ವಿಧವಿಧ ಗೆರೆಗಳನ್ನು ಕೊರೆಯುತ್ತ ಜೀವ ತುಂಬುವಳು. ಹೊರಗಡೆ ಪರಮೇಶಿಯ ಹತ್ತಿರ ಬಂದು ಚುಡಾಯಿಸುವರು: 'ಪಾಂಡವರು ಅಷ್ಟ ಅದಾರ. ದ್ರೌಪದಿ ಎಲ್ಲಿ ಕಾಣಸವಳ್ಳು' ಅವರು ಗೊಳ್ಳನೆ ನಗುವರು. ಆ ಕಿಲಕಿಲ ನಗು ಇಡೀ ಊರಿಗೆ ಕೇಳಿಸುವುದು. ಹೆಂಗಸರ ಮಾತಿನ ಮರ್ಮ ತಿಳಿಯಲಾರದೆ ಅವನು ಗಪ್ಪಗಾರ ಆಗುತ್ತಿದ್ದ. ಮಗನನ್ನು ಕಾಡಿಸಿ, ಅಳಿಸಿ ಗಲಿಬಿಲಿ ಮಾಡುತ್ತಾರೆಂದು ಅವ್ವ ಮಗನಿಗೆ ಬೆಂಬಲವಾಗಿ ಒಳಗಿನಿಂದಲೇ ಜೋರಾಗಿ ನಗುತ್ತ ಹೇಳುವಳು: 'ಜೀವಂತ ದ್ರೌಪದಿ, ಹಿಡಿಂಬಾ, ಸುಭದ್ರಾರಂಗ ನೀವ ಅದೀರಲ್ಲ. ಆಂವ ಮತ್ತ್ಯಾಕ ಸೃಷ್ಟಿ ಮಾಡಬೇಕು? ತಡೀರಿ, ಇನ್ನಷ್ಟ ದಿನಕ್ಕ ಆಂವ ನಿಮ್ಮ ಬೆನ್ನ ಹಿಂದ ಬಿದ್ದಾಗ ಗೊತ್ತಾಗ್ತದ ನಿಮಗ..'

ಆ ಮಾತಿಗೆ ಆ ಹುಡುಗಿಯರು ನಾಚಿಕೊಂಡು ಮುಖ ಕೆಂಪು ಮಾಡುವರು: 'ಹೋಗಬೇ ಅತ್ತಿ. ನಾವು ಸುಮ್ಮನ ನಗೆಚಾಟಿ ಮಾಡಿದ್ವಿ. ನಾವು ಏನೋ ಹೇಳಿದ್ವಿ. ನೀ ಏನೇನೋ ಬ್ಯಾರೆ ತಿಳಕೊಂಡಿ.'

'ನಾ ತಿಳಕೊಂಡಿದ್ದು ನನಗ ಇರಲಿ.. ನೀವು ಕಲ್ಪಿಸಿಕೊಂಡಿದ್ದು ನಿಮಗ ಇರ್ಲಿ... ಈಗ ಬರ್ರಿ. ಒಂದೊಂದು ಕಡಬು ತಿಂದು ಇನ್ನಷ್ಟು ಗಲ್ಲ ಉಬ್ಬಿಸಿಕೊಂಡು ಹೋಗುವಿರಂತೆ' ಅವರಿಗೆ ಹೆರತುಪ್ಪ ಹಚ್ಚಿದ ಬಿಸಿಬಿಸಿ ಕರಿಗಡಬು ತಿನ್ನಿಸಿ ಕಳಿಸುವಳು.

ಮಗನ ಕಲಿಯುವ, ದುಡಿಯುವ ಉಮೇದು ಕಂಡು ಅವ್ವ ಪಾರವ್ವನಿಗೂ ಹಿಗ್ಗು. ತನ್ನದೇ ದೃಷ್ಟಿ ತಾಗಿತೇನೋ ಎನ್ನುವಂತೆ ಬೆಳೆಯುತ್ತಿರುವ ಮಗನನ್ನು ನೋಡುತ್ತಿದ್ದಳು. ಅವನು ಬೆಳೆಯುವ ಪರಿ ನೋಡಿದರೆ ಅವನನ್ನು ಹೆತ್ತವರು ಅದೆಷ್ಟು ಪುಣ್ಯವಂತರು ಎಂಬ ಭಾವ ಮೂಡುತ್ತಿತ್ತು. ಅವಳು ಕೂಲಿ, ನಾಲಿ ಮಾಡುತ್ತಿದ್ದರೂ ಮಗನಿಗೆ ಯಾವ ಕೊರತೆಯಾಗದಂತೆ ಎಚ್ಚರ ವಹಿಸುತ್ತಿದ್ದಳು. 'ಪರಮ್ಯಾ, ಹಬ್ಬ ಮುಂದಿನ ಸುಕ್ರಾರ ಐತೆಂತ. ನಮ್ಮ ಎದುರುಮನಿಯವರು ಶನಿವಾರ ಅಂತಿದ್ರು. ನಿಮ್ಮ ಗೆಳ್ಯಾರು ಏನರ ಹೇಳಿದ್ರೇನು, ಅವರು ಎಂದು ಮಾಡ್ತಾರಂತ?'

ತಾಯಿಯ ಮಾತಿಗೆ ಪರಮೇಶಿ ಅನ್ನುತ್ತಿದ್ದ: 'ಯವ್ವಾ, ನಾ ಕೇಳ್ತೇನಿ ಅಂತ ನೀ ಬೈಯ್ಯಬ್ಯಾಡ. ಹೀಂಗ ಮಾಡಿದರ ಹೆಂಗ, ನಾವು ಎರಡೂ ದಿನ ಹಬ್ಬ ಮಾಡೋಣು.'

'ಅಲಲಾಲಾ ಬಹದ್ದೂರ್, ಜೋರ್ ಅದಿ ಬಿಡು ನೀನು. ನಿನ್ನ ಕೇಳಿದ್ರ ನೀಯೇನು ದಿನಾಲೂ ಹುಗ್ಗಿಹೋಳಿಗೆ ಮಾಡಿಕೋತ ಇರು ಅಂತ ಹೇಳಾಂವ. ದೊಡ್ಡ ರಾಜಕುಮಾರ ನೋಡು ನೀನು... ನಮ್ಮ ಮನ್ಯಾಗ ಬಂಗಾರ ತುಂಬಿದ ಕುಡಿಕಿ ಐತಿ ಅಂತ ತಿಳಕೊಂಡಿಯೇನೋ? ನಾವು ದಿನಾ ದುಡಿದ ಮ್ಯಾಲ ನಮಗ ದುಡ್ಡು ಸಿಗೋದು, ಕಾಳುಕಡಿ ಸಿಗೋದು. ಬೆವರು ಸುರಿಸಿದಾಗನ ಬೇಮಂಗ' ಬೇಮಂಗ ಕೂಡ ಪರಮೇಶಿಗೆ ಅಚ್ಚುಮೆಚ್ಚು. ಅದರಲ್ಲೂ ಅವ್ವ ಕುದಿಸಿ ಕೊಡುವ ಹಸಿ ಶೇಂಗಾ ಅಂದರೆ ಪಂಚಪ್ರಾಣ. ಅವಳು ಶೇಂಗಾ ಕೀಳಲಿಕ್ಕೆಂದು ಕೂಲಿಗೆ ಹೋದಾಗಲೆಲ್ಲ ಮಾಲಿಕರನ್ನು ಕೇಳಿ ಮಗನಿಗೆ ತಂದೇ ತರುತ್ತಿದ್ದಳು. ಹಬ್ಬ, ಹುಣ್ಣಿವೆ, ಅಮಾವಾಸ್ಯೆ ಬಂತೆಂದರೆ ಗೋದಿಯ ಹುಗ್ಗಿಯನ್ನೋ, ರವೆಯ ಸಜ್ಜಕವನ್ನೋ, ಹೆಸರು ಬೇಳೆಯ ಪಾಯಸವನ್ನೋ ಮಾಡುತ್ತಿದ್ದಳು. ಏನೂ ಸವಲತ್ತು ಸೌಕರ್ಯ ಸಿಗದಿದ್ದರೆ ಚಪಾತಿ, ಬೆಲ್ಲ, ಬಾಳೆಹಣ್ಣು, ಚೂರು ತುಪ್ಪ ಹಾಕುತ್ತಾಳೆ. ಮಗ ಆವಾಗ ಹೋಳಿಗೆಗಿಂತ ಇದೇ ರುಚಿ ಎನ್ನುವನು. ಊಟಕ್ಕೂ ಮಿಗಿಲಾದ ಅವಳ ಸಂತೋಷವೆಂದರೆ ಪರಮೇಶಿ ಚೆನ್ನಾಗಿ ಅಭ್ಯಾಸ ಮಾಡುತ್ತಾನೆ ಎನ್ನುವುದು. ಅವನನ್ನು ಶಾಲೆ ಬಿಡಿಸಬೇಡಿರಿ ಎಂದು ಮಾಸ್ತರರು ಹೇಳಿದ್ದಾರೆ. ಮನೆಯಲ್ಲಿ ಹೋಳಿಗೆ ಶೀಕರಣೆ ಮಾಡಿದಾಗ ಬಡಿಗೇರ ಮಾಸ್ತರರಿಗೆಂದು ಮಗನ ಕೈಯಲ್ಲಿ ಕೊಟ್ಟು ಕಳಿಸುತ್ತಿದ್ದಳು. ಊಟ ಉಪಚಾರದ ಬಗ್ಗೆಯಾಗಲಿ ಅಥವಾ ತನಗೆ ಸಹಾಯ ಮಾಡಿದವರಿಗೆ ಕೃತಜ್ಞತೆ ಹೇಳುವಲ್ಲಿಯಾಗಲಿ ಅವಳು ಎಂದೂ ಹಿಂದೆಮುಂದೆ ನೋಡಿದವಳಲ್ಲ.

ಮಗನಿಗೆ ಅಚ್ಚುಮೆಚ್ಚು ಎಂದು ಹಬ್ಬ ಮಾಡಿದಾಗಲೆಲ್ಲ ಎರಡು ಮೂರು ದಿನ ತಿನ್ನುವಷ್ಟು ಹೋಳಿಗೆಗಳನ್ನು ಅವಳು ಮಾಡೇ ಮಾಡುತ್ತಿದ್ದಳು. ಶಾಲೆಯಿಂದ ಬಂದ ಕೂಡಲೇ ಅವನು ಹೋಳಿಗೆಯಿಡುವ ಗಡಿಗೆಗೆ ಕೈಹಾಕುತ್ತಿದ್ದ. ತನ್ನ ಮಗನನ್ನು ಎಷ್ಟು ಪ್ರೀತಿಸಿದರೂ ಸಾಲದು ಅವಳಿಗೆ. ಅವಳು ಮಗನಿಗೆ ಅವ್ವ ಆಗುವುದಷ್ಟೇ ಅಲ್ಲ, ಅಪ್ಪನ ಪಾತ್ರವನ್ನೂ ನಿರ್ವಹಿಸಬೇಕಿತ್ತು. ಸತ್ತು ಹೋಗಿರುವ ಗಂಡನನ್ನು ನೆನೆಸುತ್ತ ಅದೇ ತಾಪದಲ್ಲಿಯೇ ಕುಳಿತವಳಲ್ಲ ಅವಳು. ಹಾದಿಗುಂಟ ಹೋಗಿದ್ದ, ಬೀದಿಗುಂಟ ಬಿದ್ದಿದ್ದ ಬದುಕನ್ನು ಮತ್ತೆ ಮನೆಯಲ್ಲಿ ತಂದು ಕೂಡ್ರಿಸಿದವಳು ಅವಳು. ತವರಿನವರು ಕರೆದರೂ ಹೋಗಲಿಲ್ಲ. ಬಿಕ್ಕಳಿಕೆಗಳನ್ನು ಒಳಗೆ ಅದುಮಿದಳು. ತನ್ನ ಕಾಲ ಮೇಲೆ ತಾನು ನಿಂತುಕೊಂಡಳು. ತಮ್ಮ ಹೊಲದ ಮೇಲೆ ತೆಗೆದುಕೊಂಡಿದ್ದ ಸಾಲ ಎಂದಿಗೂ ತೀರುವಂತಿರಲಿಲ್ಲ. ಬ್ಯಾಂಕಿಗೆ ಬಡ್ಡಿ ಕಟ್ಟುವುದೇ ಅವಳ ಬದುಕಿನ ಉಳಿತಾಯವಾಗಿತ್ತು. ಬಡತನವನ್ನೇ ಹಾಸಿ ಬಡತನವನ್ನೆ ಹೊದ್ದಿರುವ ಮನೆಗೆ ಮಗಳನ್ನು ಮದುವೆ ಮಾಡಿಕೊಡುವುದು ಆವಾಗ ಅವಳ ತಾಯಿಗೂ ಇಷ್ಟವಿರಲಿಲ್ಲ. ಆದರೆ ಆ ಕಾಲಕ್ಕೆ ಗಂಡುಗಳು ಎಲ್ಲಿ ಸಿಗುತ್ತಿದ್ದವು. ಸಿಕ್ಕರೂ ಎಷ್ಟು ಧಿಮಾಕು, ಏನು ದರ್ಪ. ಇದ್ದುದರಲ್ಲಿ ಇವನೇಒಳ್ಳೆಯವನು ಎಂದು ಆಯ್ದುಕೊಂಡರು.

ಪಾರವ್ವ ಮದುವೆಯಾಗಿ ಬಂದ ಮರುದಿನವೇ ಕೂಲಿ ಕೆಲಸಕ್ಕೆ ಹೋದಳು. ಅದಕ್ಕೆ ಆಕೆ ದುಃಖವನ್ನೇನೂ ಪಡಲಿಲ್ಲ. ತವರುಮನೆಯಲ್ಲಿ ಹೊಲಕ್ಕೆ